ಯಕ್ಷಗಾನ, ಜಾನಪದ ಸಂಪತ್ತು. ಕನ್ನಡ ನಾಟಕ ಕ್ಷೇತ್ರಕ್ಕೆ ವೈವಿಧ್ಯಮಯ ಸಂಗೀತ ಸ್ಪರ್ಶ ಕೊಟ್ಟ ಕಾರಂತರು, ನಾಟಕಗಳಲ್ಲಿ ಸಂಗೀತ–ಗಾಯನಕ್ಕೆ ಮಾನ್ಯತೆ ತಂದುಕೊಟ್ಟರು. 'ಸತ್ತವರ ನೆರಳು', 'ಹಯವದನ', 'ಏವಂ ಇಂದ್ರಜಿತ್', 'ಜೋಕುಮಾರ ಸ್ವಾಮಿ', 'ಗೋಕುಲ ನಿರ್ಗಮನ' – ಇವು ಅಂತಹ ಕೆಲವು ಉದಾಹರಣೆಗಳು ಮಾತ್ರ.

ಹೊಸ ರಂಗ ಪರಂಪರೆಯನ್ನು ಹುಟ್ಟುಹಾಕಿದ ಕಾರಂತರು ಮಧ್ಯಪ್ರದೇಶ ಸರ್ಕಾರ ನಡೆಸುತ್ತಿದ್ದ ಭಾರತ ಭವನದ ರಂಗಮಂಡಲ ರೆಪರ್ಟರಿ ನೇತೃತ್ವ ವಹಿಸಿದ್ದು ನಂತರ ಅವರು ಕರ್ನಾಟಕ ಸರ್ಕಾರಕ್ಕಾಗಿ ಆರಂಭಿಸಿದ್ದು 'ರಂಗಾಯಣ' ರೆಪರ್ಟರಿ.

ಹಲವಾರು ಭಾಷೆಗಳಲ್ಲಿ ನಾಟಕಗಳಿಗೆ ನಿರ್ದೇಶನ ನೀಡಿದ ಕಾರಂತರು ಆಂಧ್ರದಲ್ಲಿ 'ಸುರಭಿ'ಯಂತಹ ತಂಡವನ್ನು ಹೊಸ ಹುಮ್ಮಸ್ಸಿನಿಂದ ಪುಟಿಯುವಂತೆ ಮಾಡಿದ್ದರು. ಹಿಂದಿ ನಾಟಕ ಜಗತ್ತಿನಲ್ಲಿ ಅವರ ಸಾಧನೆ ಅನುಪಮ. ಅವರ ನಿರ್ದೇಶನದಲ್ಲಿ 'ಘಾಸೀರಾಂ ಕೊತ್ವಾಲ್' 'ಚಂದ್ರಹಾಸ', 'ಅಂಧೇರ್ ನಗರಿ ಚೌಪಾಟ್ ರಾಜಾ', 'ಸ್ಕಂದಗುಪ್ತ' ಮೊದಲಾದವು ಮೂಡಿಬಂದವು.

ಕನ್ನಡ ರಂಗಭೂಮಿಯಲ್ಲಿ ಅವರು ಸ್ಥಾಪಿಸಿದ ಮೈಲಿಗಲ್ಲುಗಳು ಹಲವಾರು. ಹಲವು ನಾಟಕಗಳಿಗೆ ಅವರು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲೂ ಕನ್ನಡದ ಕೀರ್ತಿಯನ್ನು ಹರಡಿದರು. ಕನ್ನಡ ನಾಟಕಗಳ ಸತ್ವವನ್ನು ಮಿಂಚುವಂತೆ ಮಾಡಿದ ಕಾರಂತರು ರಂಗ ಸಂಗೀತದಲ್ಲಿ ಮಾಡಿದ ಪ್ರಯೋಗ ಬಹುಕಾಲ ನಿಲ್ಲುವಂತದ್ದು.

ಪತ್ನಿ ಪ್ರೇಮಾ ಕಾರಂತರರೊಂದಿಗೆ ಕನ್ನಡದ ಮಕ್ಕಳ ನಾಟಕಗಳಿಗೆ ನಾವಿನ್ಯತೆ ತಂದುಕೊಟ್ಟರು. 'ಅಳಿಲು ರಾಮಾಯಣ', 'ಹೆಡ್ಡಾಯಣ', 'ಪಂಜರ ಶಾಲೆ', 'ನೀಲಿ ಕುದುರೆ' ಮುಂತಾದವು ಅವರ ನಿರ್ದೇಶನದ ನಾಟಕಗಳಲ್ಲಿ ಉಲ್ಲೇಖನಾರ್ಹವಾದವುಗಳು.

ರಾಷ್ಟ್ರೀಯ ನಾಟಕ ಶಾಲೆ ಹಾಗೂ ಭೂಪಾಲ್ 'ರಂಗ ಮಂಡಲ' ನಿರ್ದೇಶಕರಾಗಿದ್ದ ಕಾರಂತರ ಕರ್ನಾಟಕದ ರೇಪರ್ಟರಿ 'ರಂಗಾಯಣ'ವನ್ನು ಹೊಸ ರೀತಿಯಲ್ಲಿ ಕಟ್ಟಿದರು. ರಾಜ್ಯದುದ್ದಕ್ಕೂ ಕಲಾವಿದ– ತಂತ್ರಜ್ಞರನ್ನು ಆಯ್ಕೆ ಮಾಡಿ ಅವರ ಬಹುಮುಖ ಪ್ರತಿಭೆಯನ್ನು 'ರಂಗಾಯಣ'ದಲ್ಲಿ ಅನಾವರಣ ಮಾಡಲು ಅನುಕೂಲ ಒದಗಿಸಿದರು.

'ರಂಗಾಯಣ' ಮೈಸೂರಿನಲ್ಲಿದ್ದು ದೇಶ ವಿದೇಶಗಳ ರಂಗಾಸಕ್ತರನ್ನು ಆಕರ್ಷಿಸಿದ ರಂಗ ಸಂಸ್ಥೆ. ಪ್ರಸಿದ್ಧ ನಿರ್ದೇಶಕರಿಂದ ರಂಗಾಯಣಕ್ಕಾಗಿ ನಾಟಕಗಳನ್ನು ನಿರ್ದೇಶಿಸುವಂತೆ ಕಾರಂತರು ಹಾದಿ ಮಾಡಿದರು. ಚಿಕ್ಕಂದಿನಿಂದಲೇ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದ ಅವರು ತಮ್ಮದೇ ನಾಟಕಗಳಲ್ಲೂ ವಿಶೇಷ ಬಗೆಯ ಅಭಿನಯ ನೀಡಿದ್ದವರು. ಸಂಗೀತ ಚಿತ್ರವೆಂದೇ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ್ದ ಜಿ.ವಿ. ಅಯ್ಯರ್ ಅವರ 'ಹಂಸಗೀತೆ'ಯಲ್ಲಿ ಸಂಗೀತಗಾರನ ಪಾತ್ರ ನಿರ್ವಹಿಸಿದರು. ಮುಂದೆ ಇದು ಚಿತ್ರರಂಗದೊಂದಿಗೆ ನಂಟು ಬೆಳೆಯಲು ಕಾರಣವಾಯಿತು.

'ಚೋಮನ ದುಡಿ', 'ಕಾಡು', 'ಋಷ್ಯ ಶೃಂಗ', 'ಕನ್ನೇಶ್ವರ ರಾಮ', ಮೊದಲಾದ ಕನ್ನಡ ಚಿತ್ರಗಳಿಗೆ, ಹಿಂದಿ, ಬಂಗಾಲಿ ಚಿತ್ರಗಳಿಗೂ ಸಂಗೀತ ನಿರ್ದೇಶನ ಕೊಟ್ಟ ಶ್ರೇಯಸ್ಸು ಕಾರಂತರದು.

ಬಿ.ವಿ. ಕಾರಂತ ಹಾಗೂ ಗಿರೀಶ ಕಾರ್ನಾಡ ಜೋಡಿ ಅನೇಕ ಕಲಾತ್ಮಕ ಚಿತ್ರಗಳನ್ನು ನಿರ್ದೇಶಿಸಿದ್ದು ಅವುಗಳಿಗೆ ಅನೇಕ ಗೌರವ–ಪ್ರಶಸ್ತಿಗಳು ಸಿಕ್ಕಿವೆ. ಅವರು ತೆರೆಗೆ ತಂದ ಶಿವರಾಮ ಕಾರಂತರ ಕಾದಂಬರಿ ಆಧಾರಿತ 'ಚೋಮನ ದುಡಿ' ಸಾಕಷ್ಟು ಜನಪ್ರಿಯವಾಗಿತ್ತು.